doc-566
T.P-2.

Reg No B G 155 19 — 10 —72

In The State **First Golden Jubilee Celebrated Paper 'Satyavadi' daily, Mysore 4**

ಸತ್ಯವಾದಿ

ದುರದೃಷ್ಟಕರ

ತುಮಕೂರು— ಒಂದು ಲಾರಿ ಡ್ರೈವರನು ಮತ್ತು ಕ್ಲೀನರು ವಿಜಯದಶಮಿ ಪೂಜಾನಂತರ 100 ಹುಡುಗರನ್ನು ಲಾರಿಯಲ್ಲಿ ಖುಷಿಗಾಗಿ ಸುತ್ತಿಸಲು ಹೊರಟಾಗ ಪಾವಗಡದ ಹತ್ತಿರ ಲಾರಿ ಮಗುಚಿ, 11 ಮಕ್ಕಳು ಸತ್ತು 60 ಮಂದಿ ಗಾಯಗೊಂಡರು.

ನಿಧನ

ಬೆಂಗಳೂರು— ಪ್ರಖ್ಯಾತ ನಾಟಕ ಕಲಾವಿದರು ಶ್ರೀ ಗುಬ್ಬಿ ವೀರಣ್ಣನವರು ನಿನ್ನೆ ಸಂಜೆ ನಿಧನರಾದರೆಂದು ಪ್ರಕಟಿಸಲು ವಿಷಾದಿಸುತ್ತೇವೆ

ನಂ. ಡಿಎಸ್‌ಆರ್/ಎಡ್ವಿವಿಟಿ. 12/72 ಕ್ಯಾಂಪ್ : ಮೈಸೂರು 15 10 1972

ಮೈಸೂರು ದಸರಾ ಸಾಂಸ್ಕೃತಿಕ ಕಲರ ಮತ್ತು ಚಲನಚಿತ್ರ ಉತ್ಸವಗಳು

1972

ಪ್ರಖ್ಯಾತ ಚಿತ್ರ ಕಲಾವಿದರಾದ

ಜಯಭಾದುರಿ, ಅಮಿತಾಬ್‌ಬಚನ್
ಮತ್ತು **ಎಂ. ಜಿ. ರಾಮಚಂದ್ರನ್**

ಅವರು 20 ನೇ ಅಕ್ಟೋಬರ್ 1972 ರಂದು ಮೈಸೂರು ದಸರಾ ವಸ್ತುಪ್ರದರ್ಶನ ಪ್ರದೇಶದಲ್ಲಿ ಲಕ್ಕಿ-ಡಿಪ್ ಟಿಕೆಟ್‌ಗಳನ್ನು ಎತ್ತುವರು ಮತ್ತು ಬಹುಮಾನ ವಿನಿಯೋಗವನ್ನು ವಹಾಡುವರು.

ಆ ದಿನ ಮಾರಾಟ ಮಾಡಲಾದ ಮಾಮೂಲಿ ಪ್ರವೇಶ ಟಿಕೆಟ್‌ಗಳ ಮೇಲೆ ಬಹುಮಾನಗಳನ್ನು ಎತ್ತಲಾಗುವುದು

ಪ್ರವೇಶ ದರ ಒಂದು ರೂಪಾಯಿ ಮಾತ್ರ

ಬಹುಮಾನಗಳು

ಮೊದಲನೆ ಬಹುಮಾನ ರೂ 500/– ಬೆಲೆ ಬಾಳುವ ರೇಡಿಯೋ
ಎರಡನೆ ಬಹುಮಾನ ರೂ. 300/– ಬೆಲೆ ಬಾಳುವ ಟ್ರಾನ್ಸಿಸ್ಟರ್ ರೇಡಿಯೋ
ಮೂರನೆ ಬಹುಮಾನ ರೂ. 250/– ಬೆಲೆ ಬಾಳುವ ಬೈಸಿಕಲ್
ನಾಲ್ಕನೆ-ಬಹುಮಾನ ರೂ. 200/– ಬೆಲೆ ಬಾಳುವ ಪ್ರೆಷರ್ ಕುಕ್ಕರ್

ಮೈಸೂರು ದಸರಾ ಸಾಂಸ್ಕೃತಿಕ ಮತ್ತು ಚಲನಚಿತ್ರ ಉತ್ಸವ
ಉಪ ಸಮಿತಿ ಅಧ್ಯಕ್ಷರಿಂದ ಪ್ರಕಟಿಸಲ್ಪಟ್ಟಿದೆ

ದಸರಾ ಸಾಂಸ್ಕೃತಿಕ ಕಾರ್ಯಕ್ರಮ
ಲರ
1 9 7 2
ಸಂಜೆ 7 ಗಂಟೆಗೆ

19–10–72

ಮದ್ರಾಸಿನ ಕನಕರವರಿಂದ
ಭ ರ ತ ನಾ ಟ ಯ ಂ

ಸ್ಥಳ : ವಸ್ತುಪ್ರದರ್ಶನ ಪ್ರದೇಶ [ಕಾಂಚನ ಮುಖ್ಯ ಅತಿಥಿ]

ಮದ್ರಾಸಿನ
ಲಾಲ್‌ಗುಡಿ ಜಯರಾಂ ಮತ್ತು ಎಸ್. ರಮಣಿ ಅವರಿಂದ ಜುಗಲ್ ಬಂದಿ
ಸ್ಥಳ : ಕ್ರಾಫರ್ಡ್ ಹಾಲ್ ಸಂಜೆ 6 ಗಂಟೆಗೆ

20–10–72

ಮೈಸೂರಿನ ಜಯಲಲಿತರವರಿಂದ
ಲ
ಭ ರ ತ ನಾ ಟ ಯ ಂ

ಸ್ಥಳ : ಜೀವಣ್ಣರಾಯನ ಕಟ್ಟೆ ಸಂಜೆ 7 ಗಂಟೆಗೆ

ಮೈಸೂರಿನ ಸಾಧನಾ ಸುರೇಶ್ ಅವರಿಂದ ಹಿಂದೂಸ್ತಾನಿ ಹಾಡುಗಾರಿಕೆ
ಸ್ಥಳ : ಕ್ರಾಫರ್ಡ್ ಹಾಲ್ ಸಂಜೆ 6 ಗಂಟೆಗೆ

21–10–72

ಮೈಸೂರಿನ ರವಿ ಮತ್ತು ಚಿತ್ರ ಕಲಾವಿದರಿಂದ ನಾಟಕ

ಬಹಾದೂರ್ ಗಂಡ

[ಶ್ರೀ ಅಶ್ವತ್ಥ್, ಶ್ರೀನಾಥ್, ಜಯಶ್ರೀ, ದ್ವಾರಕೀಶ್ ಮತ್ತು ಬಿ. ವಿ. ರಾಧ]
ಸ್ಥಳ : ವಸ್ತುಪ್ರದರ್ಶನ ಪ್ರದೇಶ ಸಂಜೆ 7 ಗಂಟೆಗೆ

ಮೈಸೂರಿನ ಚಿಂತನಪಲ್ಲಿ ರಾಮಚಂದ್ರರಾವ್ ಅವರಿಂದ ಕರ್ನಾಟಕ ಹಾಡುಗಾರಿಕೆ
ಸ್ಥಳ : ಕ್ರಾಫರ್ಡ್ ಹಾಲ್ ಸಂಜೆ 6 ಗಂಟೆಗೆ

22–10–72

ಮೈಸೂರಿನ ವಸುಂಧರ ದೊರೈಸ್ವಾಮಿ ಅವರಿಂದ ಭರತನಾಟ್ಯಂ
ಸ್ಥಳ : ಕ್ರಾಫರ್ಡ್ ಹಾಲ್ ಸಂಜೆ 6 ಗಂಟೆಗೆ

ಮದ್ರಾಸಿನ ಎಸ್. ಜಾನಕಿ ಮತ್ತು ಪಾರ್ಟಿರವರಿಂದ ಕನ್ನಡ ಚಿತ್ರಗೀತೆಗಳು

ಸ್ಥಳ : ಜೀವಣ್ಣರಾಯನಕಟ್ಟೆ ಸಂಜೆ 6 ಗಂಟೆಗೆ

ಬೆಂಗಳೂರಿನಲ್ಲಿ ಗಲಭೆ

ಮುನಿರೆಡ್ಡಿಪಾಳ್ಯದಲ್ಲಿ ಮಂಗಳವಾರ ರಾತ್ರೆ ದಸರಾ ಮೆರವಣಿಗೆ ಬಂದಾಗ ಒಂದು ಪೂಜಾಸ್ಥಾನದೊಳಗಿನಿಂದ ಎದುರಿಸಲಾಯಿತು – ಇರಿತದಿಂದ ಒಬ್ಬ ಪೋಲೀಸು ಪ್ಯಾದೆಯ ಸಾವೂ, ಬಾಣಬಿರುಸು ಅಂಗಡಿಯವನು ಸುಟ್ಟಿ ಸತ್ತಿದ್ದೂ, 22 ವರ್ಷದ ಒಬ್ಬ ಯುವಕನ ಕೊಲೆಯೂ ನಡೆದಿದೆ – ಮುನಿರೆಡ್ಡಿಪಾಳ್ಯ, ಗಂಗೆನಹಳ್ಳಿ, ಮತೇಹಳ್ಳಿಯಲ್ಲಿ ಅಂಗಡಿಗಳು ಮುಚ್ಚಲ್ಪಟ್ಟವು – ಅನೇಕ ಪುರುಷರು ತಮ್ಮ ಸಂಸಾರಗಳನ್ನು ನಗರದ ಇತರ ಭಾಗಗಳಿಗೆ ಸಾಗಿಸುತ್ತಿದ್ದರು – ವಿರೋಧ ಗುಂಪುಗಳು ಬೆಂಕಿಹತ್ತಿಸುವ, ಲೂಟಿ ಮಾಡುವ ಕಾರ್ಯದಲ್ಲಿ ತೊಡಗಿದ್ದವೆಂದು ಪೋಲೀಸು ಕಮಿಷನರರು ಹೇಳಿದರು - 8 ಆಟೋರಿಕ್ಷಾ, ಒಂದು ಸ್ಕೂಟರು, ಒಂದು ಮೋಟಾರು ಸೈಕಲ್, ಹಲವು ಚಿಕ್ಕಪುಟ್ಟ ಅಂಗಡಿಗಳು ಸುಡಲ್ಪಟ್ಟವು - ಒಂದು ಪಟಾಕಿ ಅಂಗಡಿ ಪೂರ್ತಿ ನಾಶವಾಯಿತು – 76 ಮಂದಿ ಬಂಧಿಸಲ್ಪಟ್ಟಿರುವರು – ಕೊಲೆ, ಅಗ್ನಿಸ್ಪರ್ಶ ಲೂಟಿಗಾಗಿ ನಾಲ್ಕು ಕೇಸ್‌ಗಳು ರಿಜಿಸ್ಟರು ಮಾಡಿಕೊಳ್ಳಲಾಗಿದೆ – ನಿಧನಗೊಂಡ ಪೋಲೀಸು ಪ್ಯಾದೆ ಚನ್ನಪ್ಪಾಚಾರಿಯು ಪೂರ್ಣ ಗೌರವದೊಡನೆ ಸಮಾಧಿ ಮಾಡಲ್ಪಟ್ಟನು – ಕರ್ಫ್ಯೂ ಜಾರಿಮಾಡಲಾಗಿದೆ.

★

ಮೈಸೂರು ವಿ. ವಿ ಕುಲಪತಿ ಪ್ರೊ ॥ ಜವರೇಗೌಡರ ಬಗ್ಗೆ ಪ್ರಶಂಸೆ

ಅಕ್ಟೋಬರು 12 ನೇ ತಾರೀಖು ಕೊಲಂಬೋದಲ್ಲಿ ಪ್ರಾರಂಭವಾದ ಏಷ್ಯಾದ ಸಂಪರ್ಕ ಸಮೂಹ ಮತ್ತು ಪತ್ರಿಕೋದ್ಯಮ ಶಿಕ್ಷಣ ತಜ್ಞರು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ ॥ ದೆ ಜವರೇಗೌಡರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮ ಉಚ್ಚ ಶಿಕ್ಷಣಕ್ಕೆ ಕೊಡುತ್ತಿರುವ ಪ್ರೋತ್ಸಾಹವನ್ನು ಮುಕ್ತ ಕಂಠದಿಂದ ಹೊಗಳಿದರು.

★

ಅಣ್ಣಾ ಡಿಎಂಕೆ

ಮದರಾಸು— ಎಂ.ಜಿ.ಆರ್. ರವರು, ಅಣ್ಣಾ ಡಿಎಂಕೆ ಆಶೀರ್ವದಿಸಿದ್ದು, ಆಡಳಿತ ಪಕ್ಷ ಔಪಚಾರಿಕವಾಗಿ ಒಡೆದಂತೆ ಆಗಿವೆ – ಅವರು ಪತ್ರಿಕಾ ಗೋಷ್ಠಿಯಲ್ಲಿ ಪ್ರಾರಂಭದಲ್ಲಿ ತಮಿಳುನಾಡುವಿನಲ್ಲಿ ತಮ್ಮ ಪಕ್ಷದ 20000 ಯೂನಿಟ್‌ಗಳನ್ನು ಸ್ಥಾಪಿಸಲಾಗುವುದೆಂದು ಹೇಳಿದರು – ತಮ್ಮ ಧ್ವಜವಾಗಿ ಅಣ್ಣಾ ದೊರೈ ಭಾವಚಿತ್ರ ದೊಂದಿಗೆ ಡಿಎಂಕ ಕೆಂಪು-ಕಪ್ಪು ಬಾವುಟವನ್ನು ಹೊಂದಿರುವುದಾಗಿ ಹೇಳಿದರು – ಪಾರ್ಟಿಯಲ್ಲಿ ಅಧ್ಯಕ್ಷರಿಲ್ಲದೆ ಒಬ್ಬ ಕಾರ್ಯದರ್ಶಿ ಇರುವರೆಂದೂ, ಪಾನನಿರೋಧ ಸೇರಿ ಅಣ್ಣಾರ ಆದರ್ಶಗಳನ್ನು ಅನುಸರಿಸಲಾಗುವುದೆಂದೂ ಹೇಳಿದರು.

★

ಎಂ ಜಿ ಆರ್ ಪರದ್ದು

ಮದರಾಸು— ದಕ್ಷಿಣ ಆರ್ಕಾಟಿನ ವೃದ್ಧಾಚಲದಲ್ಲಿ ಪ್ರದರ್ಶನ ನಡೆಸಿದ ಎಂ ಆರ್ ಬೆಂಬಲಿಗರ ಮೇಲೆ ಪೋಲೀಸರು ಮಾಡಿದ ಲಾಠಿ ಛಾರ್ಜು ಮತ್ತು ಅಶ್ರುವಾಯು ಪ್ರಯೋಗ ಪರಿಣಾಮಕಾರಿಯಾಗದಿರಲು ಗೋಳಿಬಾಂಬು ಮಾಡಿದರು; 15 ಮಂದಿ ಗಾಯಗೊಂಡರು – ಕಲ್ಲೆಸೆತದಿಂದ ಒಬ್ಬ ಪೋಲೀಸು ಇನ್‌ಸ್ಪೆಕ್ಟರು ಮತ್ತು 12 ಮಂದಿ ಕಾನ್‌ಸ್ಟೆಬಲರು ಗಾಯಗೊಂಡರು.

ಅಮೇರಿಕಾದಲ್ಲಿ ಬಡಜನರು

ವಾಷಿಂಗ್ಟನ್— 1970 ರಲ್ಲಿ ಅಮೇರಿಕಾದಲ್ಲಿಯ ಸುಮಾರು 27 ಮಿಲಿಯ ಜನರು ಬಡತನದಲ್ಲಿ ಜೀವಿಸುತ್ತಿದ್ದುದಾಗಿ " ಟಾಸ್ " ಪ್ರಕಟಿಸಿದೆ.

ಜಪಾನಿನ ಅಪಾರ ವಿದೇಶಿ ವಿನಿಮಯ

ಟೋಕಿಯೊ— ಜಪಾನಿನ ವಿದೇಶೀ ವಿನಿಮಯ ರಿಸರ್ವ್ ಕಳೆದ ಸೆಪ್ಟಂಬರಿನಲ್ಲಿ 16489 ಮಿಲಿಯ ಡಾಲರು (ಸುಮಾರು ರೂ. 12309 ಕೋಟಿ) ಇದ್ದಿತೆಂದು ಅರ್ಥ ಸಚಿವಾಲಯ ಪ್ರಕಟಿಸಿದೆ.

ವುಡ್‌ಲಾಂಡ್ 13-10-72 ರಿಂದ ಅಮೋಘ 3 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ
ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಅಪೇರಾ 13 10 72 ರಿಂದ

ಬಾಂಧವ್ಯ

ಪಾತ್ರ – ಆಶ್ವಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಪಂಡರೀಬಾಯಿ,
ಸಂಧ್ಯ ರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

★

SHAKTI SUDHA

A Superb Tonic

★

Help The Gorakshana

— Humanitarian Propoganda Monthly ....

Protect the Cow

Quality Printing Neat Binding

Lakshminarasimha Press

Sivarampet, Mysore

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore